ಸಾಕ್ಷಿಯನ್ನು ದಿನಾಂಕಃ 30/04/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಎದುರುದಾರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಎದುರುದಾರ ಸಂಸ್ಥೆಯಲ್ಲಿ ಬಸ್ ಚಾಲಕ ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**<u>ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ</u>**

Authorization letter ನ್ನು ನಿಆರ್ 1 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ- ಅರ್ಜಿದಾರ ಪರ ವಕೀಲರಿಂದಃ**

ಮುಳಗುಂದ ಪೊಲೀಸನವರು ನಿಮ್ಮ ಮೇಲೆ ಪ್ರಕರಣ ಹಾಕಿ ಚಾರ್ಜಶೀಟ್ ಹಾಕಿದ್ದಾರೆ ಅದು ಜೆ ಎಮ್ ಎಫ್ ಸಿ ನ್ಯಾಯಾಲಯದಲ್ಲಿ ನೆಡೆಯುತ್ತಿದೆ ಎಂದರೆ ಸರಿ. ನಿಮ್ಮ ವಾಹನದಲ್ಲಿ ತಾಂತ್ರಿಕ ದೋಷ ಇತ್ತು ಎಂದು ಹೇಳುತ್ತಿದ್ದೀರಿ ಅದರ ಬಗ್ಗೆ ನಿಮ್ಮ ಮೇಲಾಧಿಕಾರಿಗೆ ತಿಳಿಸಿರುತ್ತೀರಿ ಎಂದರೆ ಸರಿ. ಸಾಮಾನ್ಯವಾಗಿ ನೀವು ಬಸ್ಸನ್ನು ಡಿಪೋದಿಂದ ನಿಮ್ಮ ವಶಕ್ಕೆ ಪಡೆದುಕೊಳ್ಳುವಾಗ ಅದರಲ್ಲಿ ಏನಾದರೂ ತಾಂತ್ರಿಕ ದೋಷ ಇತ್ತು ಎಂದರೆ ಅವರಿಗೆ ಹೇಳುತ್ತೀರಿ ಎಂದರೆ ಸರಿ. ಬಸ್ಸಿನಲ್ಲಿ ಯಾವುದೇ ತಾಂತ್ರಿಕ ದೋಷ ಇರಲಿಲ್ಲ ನೀವೇ ವಾಹನವನ್ನು ಅಜಾಗೂರುಕತೆಯಿಂದ ಮತ್ತು ಜೋರಾಗಿ ಚಲಾಯಿಸಿದ್ದರಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನಿಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲು ಬಸ್ಸಿನಲ್ಲಿ ತಾಂತ್ರಿಕ ದೋಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿಃ 5 ಆರ್ ಟಿ ಓ ಅಧಿಕಾರಿ ಬಸ್ಸನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ತಾಂತ್ರಿಕ ದೋಷ ಇರಲಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

<u>ನ್ಯಾಯಾಲಯದ ಪ್ರಶ್ನೆಗಳುಃ</u>

ಅರ್ಜಿದಾರರು ನಿಮ್ಮ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಬಸ್ಸಿನಲ್ಲಿ ಏನು ತಾಂತ್ರಿಕ ದೋಷ ಇತ್ತು ಎಂದು ಕೇಳಲಾಗಿ ಸಾಕ್ಷಿ ನಾನು ಬಸ್ಸು ತೆಗೆದುಕೊಂಡು ಹೋಗುತ್ತಿದ್ದೆ ರಸ್ತೆ ತಿರುವು ಇತ್ತು ನಾನು ಬಸ್ಸಿನ ಸ್ಟೇರಿಂಗ್ ಒಳಿಸುತ್ತಿದ್ದಾಗ ಸ್ಟೇರಿಂಗ್ ರಾಡ್ ಕಟ್ಟ್ ಆಗಿರುತ್ತದೆ ಅದು ನನ್ನಗಮನಕ್ಕೆ ಬಂದಿರುವುದಿಲ್ಲ ಬ್ರೇಕ್ ಹಾಕಲು ಹೋದೆ ಅದು ರಸ್ತೆ ತಿರುವು ಇದಿದ್ದರಿಂದ ಬಸ್ಸು ತೆಗ್ಗಿನಲ್ಲಿ ಹೋಗಿ ನಿಂತಿರುತ್ತದೆ. ನಮ್ಮ ಬಸ್ಸಿಗೆ ಯಾವುದೇ ಹಾನಿ ಆಗಿರುವುದಿಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
30.04.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**